ವಾಜಪೇಯಿ ನಗರ ವಸತಿ ಯೋಜನೆ

ನಗರ	ಮಂಜೂರಾದ ಮನೆಗಳು			ಒಟ್ಟು
	2011–12	2012–13	2013–14	
ಬಂಕಾಪೂರ ಪುರಸಭೆ	0	115	69	184
ಬ್ಯಾಡಗಿ ಪುರಸಭೆ	0	300	69	369
ಹಾನಗಲ್ ಪುರಸಭೆ	0	300	71	371
ಹಾವೇರಿ ಪುರಸಭೆ	0	0	0	0
ಹಿರೇಕೆರೂರಪಟ್ಟಣ ಪಂಚಾಯತ್	0	199	40	239
ರಾಣೇಬೆನ್ನೂರು ನಗರಸಭೆ	0	850	57	907
ಸವಣೂರು ಪುರಸಭೆ	0	192	58	250
ಶಿಗ್ಗಾಂವ ಪುರಸಭೆ	**0**	**67**	**39**	**106**
ಒಟ್ಟು	**0**	**2023**	**403**	**2426**

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಗೌರವಧನ

1370(1659); ಶ್ರೀ ಕೋಳಿವಾಡ ಕೆ.ಬಿ.

ಅ) ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೀಡುತ್ತಿರುವ ಗೌರವಧನ ಎಷ್ಟು;

ಆ) ಈ ಗೌರವಧನದಿಂದ ಕೆಲಸ ಮಾಡುತ್ತಿರುವ ನೌಕರರು ತಮ್ಮ ಕುಟುಂಬದ ನಿರ್ವಹಣೆ ಮಾಡುವುದು ಸಾಧ್ಯವೇ;

ಇ) ನೌಕರರ ಗೌರವಧನ ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಈ ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ;

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ)

	ಕೇಂದ್ರ ಸರ್ಕಾರದಿಂದ ನೀಡುತ್ತಿರುವ ಗೌರವಧನ	ರಾಜ್ಯ ಸರ್ಕಾರದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ	ಒಟ್ಟು
ಕಾರ್ಯಕರ್ತೆಯರು	ರೂ.3000/–	ರೂ.2500/–	ರೂ.5500/–
ಮಿನಿ ಅಂಗನವಾಡಿ ಕಾರ್ಯಕರ್ತೆಯರು	ರೂ.2250/–	ರೂ.1250/–	ರೂ.3500/–
ಅಂಗನವಾಡಿ ಸಹಾಯಕಿಯರಿಗೆ	ರೂ.1500/–	ರೂ.1250/–	ರೂ.2750/–

ಆ) ಅಂಗನವಾಡಿ ಕಾರ್ಯಕರ್ತೆ/ಸಹಾಯಕಿರಿಗೆ ಐಸಿಡಿಎಸ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಕ್ರಮವಾಗಿ ಮಾಹೆಯಾನ ರೂ. 3.000/– ಹಾಗೂ 1.500/–ರಂತೆ ದೇಶಾದ್ಯಂತ ಗೌರವಧನ ನೀಡಲಾಗುತ್ತಿದೆ. ಅಲ್ಲದೆ ರಾಜ್ಯ ಸರ್ಕಾರದ ವತಿಯಿಂದ ಸಹ ಹೆಚ್ಚುವರಿ ಗೌರವಧನ ಕ್ರಮವಾಗಿ ಮಾಹೆಯಾನ ರೂ. 2.500/– ಹಾಗೂ 1.250/– ಗಳನ್ನು ನೀಡಲಾಗುತ್ತಿದೆ.

ಇವರುಗಳ ಸೇವೆ ಅರೆಕಾಲಿಕ ಸೇವೆಯಾಗಿರುವುದರಿಂದ ಮೇಲಿನಂತೆ ಗೌರವಧನ ಪಾವತಿಸಲಾಗುತ್ತಿದೆ.

ಇ) 2014–15ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.500/–, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ತಲಾ ರೂ.250/– ಮಾಹೆಯಾನ ಗೌರವಧನ ಹೆಚ್ಚಿಸಲಾಗಿರುತ್ತದೆ.

ಈ) ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ 0–6 ವರ್ಷದ ಮಕ್ಕಳಿಗೆ, ಗರ್ಭಿಣಿ–ಬಾಣಂತಿಯರಿಗೆ ಹಾಗೂ ಕಿಶೋರಿಯರಿಗೆ ನೀಡುತ್ತಿರುವ ಐ.ಸಿ.ಡಿ.ಎಸ್ ಸೇವೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುವಾಗುವಂತೆ ಪುನರ್ ರಚಿಸಲು ಹಾಗೂ ಬಲಪಡಿಸಲು ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು ಮಿಷನ್‌ಮೋಡ್‌ನಲ್ಲಿ ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ. ಅದರಲ್ಲಿ ಶೇ.10ರಷ್ಟು ಯೋಜನೆಗಳನ್ನು ಮಾತ್ರ ಸ್ವಯಂಸೇವಾ ಸಂಸ್ಥೆಗಳು ನಡೆಸಲು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ. ಇದು ಐ.ಸಿ.ಡಿ.ಎಸ್ ಯೋಜನೆಯ ಪುನರವ ರಚನೆಯ ಹೊರತು ಖಾಸಗೀಕರಣವಲ್ಲ.

ನರೇಗಾ ಯೋಜನೆಯಡಿ ಉದ್ಯೋಗ ಕಾರ್ಡ್

1471(1711); ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ)

ಅ) ರಾಜ್ಯದಲ್ಲಿ ಒಟ್ಟು ಲಭ್ಯವಿರುವ ಎಂ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ನೀಡಿರುವ ಉದ್ಯೋಗ ಖಾತೆ (ಜಾಬ್ ಕಾರ್ಡ್) ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಇದರ ಅಂದಾಜಿನಂತೆ ಕಳೆದ 2 ವರ್ಷಗಳಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾಗಿರುವ ಹಣವೆಷ್ಟು;

ಇ) ಇಲ್ಲಿಯವರೆಗೆ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿರುವ ಹಣದ ಮೊತ್ತವೆಷ್ಟು;

ಈ) ಇದರಲ್ಲಿ, ಎಷ್ಟು ಹಣವನ್ನು ಬಳಸಿಕೊಳ್ಳಲಾಗಿದೆ (ಜಿಲ್ಲಾವಾರು ವಿವರ ನೀಡುವುದು)?